**ದಿನಾಂಕಃ 11-07-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲುಃ ಶ್ರೀ ಯು.ಎಂ. ವಕೀಲರಿಂದ ಪ್ರತಿವಾದಿಪರ.**

ನಾನು ರೊಪ್ಪದಲ್ಲಿ ವಾಸವಾಗಿರುತ್ತೇನೆ. 1 ರಿಂದ 3 ನೇಯ ಪ್ರತಿವಾದಿಗಳು ನನ್ನ ಮೈದುನಂದಿರು ಆಗಬೇಕು. ಗಂಗಮ್ಮ ಅವರನ್ನು ನಾನು ಪಾವಗಡ ಕಣಿವೇ ನರಸಿಂಹ ಸ್ವಾಮಿ ದೇವಸ್ಥಾನದಲ್ಲಿ ವಿವಾಹವಾಗಿರುತ್ತೇನೆ. 1972 ರಲ್ಲಿ ನಾನು ವಿವಾಹವಾಗಿರುತ್ತೇನೆ ಹಾಗೂ ಮದುವೆಯಾದ ದಿನಾಂಕ ನನಗೆ ನೆನಪಿರುವುದಿಲ್ಲ. ನಮ್ಮ ಮದುವೆಗೆ ಸಂಬಂಧಿರು ಬಂದಿರುವುದಿಲ್ಲ. ನನ್ನ ಮತ್ತು ಗಂಗಮ್ಮನ ವಿವಾಹವಾಗಿದೆ ಎಂದು ಸಾಬೀತುಪಡಿಸಲು ನಾನು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಗಂಗಮ್ಮ ರವರು ಆಚಾರ್ಯ ಜನಾಂಗಕ್ಕೆ ಸೇರಿದವರು ಎಂದರೆ ಸರಿ. ನಾನು ಗೊಲ್ಲ ಜನಾಂಗಕ್ಕೆ ಸೇರಿದವನಾಗಿರುತ್ತೇನೆ ಹಾಗೂ ನಮ್ಮದು ಅಂತರ್ಜಾತಿ ವಿವಾಹವಾಗಿರುತ್ತದೆ. ನಮ್ಮ ವಿವಾಹವನ್ನು ನಾನು ನೋಂದಣಿ ಮಾಡಿಸಿರುವುದಿಲ್ಲ. ನಾನು ವಿವಾಹದ ಸಮಯದಲ್ಲಿ ಡಿಗ್ರಿ ಓದುತ್ತಿದ್ದೆ. ಆ ಸಮಯದಲ್ಲಿ ಗಂಗಮ್ಮ ರವರನ್ನು ಚಿತ್ರದುರ್ಗದಲ್ಲಿ ನರ್ಸಿಂಗ್ ತರಬೇತಿ ಪಡೆಯುತ್ತಿದ್ದರು ನಮ್ಮ ತಂದೆಯವರೇ ಅವರನ್ನು ಕಳುಹಿಸಿದ್ದರು. ಮದುವೆಯಾದ ತಕ್ಷಣ ನಾವಿಬ್ಬರೂ ನಮ್ಮ ಶಿಕ್ಷಣವನ್ನು ಮುಂದುವರೆಸಿರುತ್ತೇವೆ ನಂತರ 1973 ರಲ್ಲಿ ಗಂಗಮ್ಮ ರವರಿಗೆ ಮಧುಗಿರಿ ತಾಲ್ಲೂಕಿನ ಕಡಗತ್ತೂರಿನಲ್ಲಿ ನರ್ಸ್ ಆಗಿ ನೇಮಕ ಆಗಿದ್ದು, ನಾವು ಅಲ್ಲಿ ಯೇ ನಮ್ಮ ವೈವಾಹಿಕ ಜೀವನವನ್ನು ಪ್ರಾರಂಭಿಸಿರುತ್ತೇವೆ. ದಿನಾಂಕಃ 07-09-1966 ರಲ್ಲಿ ಗಂಗಮ್ಮ ರವರಿಗೆ ಕೋಟಪ್ಪ ಚಾರಿಯವರೊಂದಿಗೆ ಮಧುಗಿರಿ ತಾಲ್ಲೂಕು ಜವನಯ್ಯನಪಾಳ್ಯ ದವರೊಂದಿಗೆ ವಿವಾಹವಾಗಿತ್ತು ಎಂದರೆ ಸರಿಯಲ್ಲ. ನಂತರದಲ್ಲಿ

ಕೋಟಪ್ಪ ಚಾರಿಯವರು ತೀರಿಹೋಗಿರುತ್ತಾರೆ ಎಂದರೆ ಸರಿಯಲ್ಲ. ನನಗೆ 2 ನೇ ಹೆಂಡತಿ ಇರುತ್ತಾರೆ ಎಂದರೆ ಸರಿ.

ಪ್ರಶೆಃ ನಿಮ್ಮ 2 ನೇ ಹೆಂಡತಿಗೆ ಎಷ್ಟು ಜನ ಮಕ್ಕಳು ?

ಉತ್ತರಃ 3 ಜನ ಹೆಣ್ಣು ಮಕ್ಕಳು ಇರುತ್ತಾರೆ, ಅವರುಗಳ ಹೆಸರು ನಾಗವೇಣಮ್ಮ, ಎನ್. ರೇಣುಕಬಾಲಿ, ಎನ್. ಕವಿತಾಬಾಲಿ ಆಗಿರುತ್ತದೆ.

ಪ್ರಶೆಃ ನಿಮ್ಮ 2 ನೇ ಹೆಂಡತಿಯ ಹೆಸರು ಏನು ?

ಉತ್ತರಃ ಬಿ. ಸಂಜೀವಮ್ಮ ಆಗಿರುತ್ತದೆ.

ಪ್ರಶೆಃ ನಿಮ್ಮ 2 ನೇ ಹೆಂಡತಿಯನ್ನು ಯಾವ ವರ್ಷದಲ್ಲಿ ವಿವಾಹವಾಗಿರುತ್ತೀರಿ ?

ಉತ್ತರಃ ಬಿ. 1975 ರಲ್ಲಿ ವಿವಾಹವಾಗಿರುತ್ತೇನೆ.

ಪ್ರಶೆಃ ನಿಮ್ಮ 2 ನೇಯ ಮದುವೆಯಾಗುವ ಪೂರ್ವದಲ್ಲಿ ಗಂಗಮ್ಮರವರೊಂದಿಗೆ ವಿಚ್ಛೇದನ ಪಡೆದಿರುತ್ತೀರಾ ?

ಉತ್ತರಃ ವಿಚ್ಛೇದನ ಪಡೆದಿರುವುದಿಲ್ಲ. ಗಂಗಮ್ಮರವರಿಗೆ ಮಕ್ಕಳಾಗಾದ ಕಾರಣ ಗಂಗಮ್ಮ ರವರೇ ಖುದ್ದು ನಿಂತು ನನಗೆ 2 ನೇ ಮದುವೆ ಮಾಡಿಸಿರುತ್ತಾರೆ.

ಪ್ರಶೆಃ ನೀವು ಯಾವ ವರ್ಷದಲ್ಲಿ ಶಿಕ್ಷಕರಾಗಿ ನೇಮಕರಾಗಿತ್ತೀರಾ ?

ಉತ್ತರಃ 1980 ರಲ್ಲಿ ನಾನು ಮುಖ್ಯ ಉಪಾಧ್ಯಾಯಕರಾಗಿ ಖಾಸಗೀ ಶಾಲೆಯಲ್ಲಿ ನೇಮಕ ಹೊಂದಿರುತ್ತೇನೆ.

ಪ್ರಶೆಃ ನಿಮ್ಮ 3 ಜನ ಹೆಣ್ಣುಮಕ್ಕಳು ಏನು ಮಾಡುತ್ತಾರೆ?

ಉತ್ತರಃ ಅವರುಗಳ ವಿವಾಹವಾಗಿರುತ್ತದೆ ಹಾಗೂ ಅವರು ಉದ್ಯೋಗವನ್ನು ಕೂಡ ಮಾಡುತ್ತಿದ್ದಾರೆ.

ನನ್ನ ಮತ್ತು ನನ್ನ ಮಕ್ಕಳ, ಸಂಜೀವಮ್ಮ ರವರ ನಡುವೆ ಸಂಬಂಧ ಚೆನ್ನಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಸಂಜೀವಮ್ಮ ಒಟ್ಟಾಗಿ ವಾಸವಿರುವುದಿಲ್ಲ ಎಂದರೆ ಸರಿಯಲ್ಲ ಈಗ ಸದ್ಯಕ್ಕೆ ಅವರೂ ಚಿಕಿತ್ಸೆಗಾಗಿ ಹೈದಾರಾಬಾದ್ ಗೆ ಹೋಗಿರುತ್ತಾರೆ.

(ವಕೀಲರ ಕೋರಿಕೆಯ ಮೇರೆಗೆ ಮುಂದುವರಿದ ಪಾಟೀಸವಾಲಿಗೆ ಮುಂದೂಡಲಾಯಿತು)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ**

**ಎ.ಸಿ.ಜೆ., ಪಾವಗಡ.**